ಬೊಂಬಾಯಿಂದ, ಕೇರಳದಿಂದ ಜನರು ಬಂದು ಈ ಕೊಲೆ ಮಾಡುತ್ತಿದ್ದಾರೆ ಎಂದು ಅವರೇ ಹೇಳುತ್ತಿದ್ದಾರೆ ಅಂದ ಮೇಲೆ ಇದಕ್ಕಿಂತ ಇನ್ನೇನು ಬೇಕು? ಇದಕ್ಕೆ ಐ ವಿಟ್ನೆಸ್ ಇರಬೇಕೆ? ಬಾಂಬೆಯವರೇ ಇಂದು ಇದನ್ನು ಮಾಡುತ್ತಿದ್ದಾರೆ, ಕೇರಳದವರೇ ಬಂದು ಮಾಡುತ್ತಿದ್ದಾರೆ, ಈ ಕಾರಣದಿಂದಾಗಿ ಈ ಸಮಸ್ಯೆ ಇಷ್ಟೊಂದು ಉಲ್ಬಣಗೊಂಡಿದೆ ಎಂದು ಅವರೇ ಹೇಳುತ್ತಿದ್ದಾರೆ. ನಾವು ಸಿ.ಜಿ.ಐ. ಎನಕ್ವೈರಿ ಮಾಡುವುದಕ್ಕೆ ತಯಾರಿಲ್ಲ ಎಂದು ಹೇಳುವುದಾದರೆ, ನೀವು ಸಿ.ಜಿ.ಐ. ಎನಕ್ವೈರಿಗೆ ಒಪ್ಪಿಕೊಳ್ಳುವವರಿಗೂ ನಾವು ಇಲ್ಲೇ ಕುಳಿತುಬಿಡುತ್ತೇವೆ. ನಿಮ್ಮ ಮನಸ್ಸಿಗೆ ಯಾವಾಗ ಬರುತ್ತದೆಯೋ ಆವಾಗ ಮಾಡಿ.

ಶ್ರೀ ಮಂಜುನಾಥ ಸಿ. ಕುನ್ನೂರು : ಮಾನ್ಯ ಸಭಾಧ್ಯಕ್ಷರೆ, ಕಳೆದ ಹತ್ತೂವರೆ ತಿಂಗಳಿಂದ ಇಡೀ ರಾಜ್ಯದಲ್ಲಿ ಸತ್ಯಾಗ್ರಹ ನಡೆಯುತ್ತಿದೆ ಎಂದರೆ ಇದು ಎಷ್ಟುಗಹನ ವಿಚಾರ ಎಂಬುದನ್ನು ತಾವೇ ಯೋಚನೆ ಮಾಡಿ ನೋಡಿ.

(ಈ ಹಂತದಲ್ಲಿ ಮಾನ್ಯ ಅಂದದಗಟ್ಟಿ, ಮಲ್ಲಿಕಾರ್ಜುನ ಖರ್ಗೆ, ಕಾಗೋಡು ತಿಮ್ಮಪ್ಪ, ಸಗೀರ್ ಅಹ್ಮದ್, ಶಿವರಾಮು, ವಿ.ಎಸ್. ಕೌಜಲಗಿ, ಮಂಜುನಾಥ ಸಿ. ಕುನ್ನೂರು, ಡಾ. ಮಲಕರೆಡ್ಡಿ, ಇನ್ನೂ ಮುಂತಾದವರು ಮಾನ್ಯ ಸಭಾಧ್ಯಕ್ಷರ ಪೀಠದ ಮುಂದಿರುವ ಅವರಣದಲ್ಲಿ ಬಂದು ಧರಣಿ ಕುಳಿತರು).

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಬೇರೆ ಇನ್ನೇನು ಮಾಡುವುದಕ್ಕೆ ಸಾಧ್ಯವಾಗುತ್ತದೆ? ನಾವು ಕೂಗಾಟ, ಹೊಡೆದಾಟ ಬಡಿದಾಡ ಮಾಡುವುದಕ್ಕಾಗುತ್ತದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೇ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮಾನ್ಯ ಕಾಗೋಡು ತಿಮ್ಮಪ್ಪನವರು, ಇವರೆಲ್ಲಾ ಹಿಂದೆ ಮಂತ್ರಿಗಳಾಗಿ ಆಡಳಿತವನ್ನು ನಡೆಸಿರುವವರು. ನಾನು ಈಗಲೂ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲಿ ಯಾರಮೇಲಾದರೂ ಅನುಮಾನ ಇದ್ದರೆ, ಅಥವಾ ಫರ್ದರ್ ಎವಿಡೆನ್ಸ್ ಏನಾದರೂ ಇದ್ದರೆ ಅದನ್ನು ಅವರು ಕೊಟ್ಟರೆ ಒಪ್ಪಿಕೊಳ್ಳಬಹುದು. ಆದರೆ ಅವರ ಇಲ್ಲಿ ಎವಿಡೆನ್ಸ್ ಕೊಡುವುದಾದರೆ ಅದನ್ನು ನಾನು ತೆಗದುಕೊಳ್ಳುವುದಕ್ಕಾಗುವುದಿಲ್ಲ. Any further evidence, if they have got, they have to give it to police officers. The Government assures that the Director General of Police, who is supposed to be man of greatest integrity, he himself will took into the matter and further investigate. That much assurance I can give.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ನಾನು ಮೊದಲು ಮಾತನಾಡುವಾಗಲೇ ಹೇಳಿದ್ದೇನೆ. ಇಂಥದೇ ವ್ಯವಸ್ಥೆ ಆಗಬೇಕೆಂದು ಹೇಳುವುದಿಲ್ಲ. ಆದರೆ ಸಿ.ಜಿ.ಐ. ಎನಕ್ವೈರಿ ಆಗಬೇಕೆಂಬುದು ನನ್ನ ಒತ್ತಾಯ ಅಲ್ಲಿ ನಾವಂತೂ ಸಂಪೂರ್ಣವಾಗಿ ನಂಬಿಕೆಯನ್ನು